ಕ್ರೀಡಾ ಪಟುಗಳಿಗೆ ಸೌಲಭ್ಯ ಒದಗಿಸುವುದು

೬೦೫. ಶ್ರೀ ಕೆ. ವಸಂತಬಂಗೇರ (ಬೆಳ್ತಂಗಡಿ). — ನ್ಯಾಯ, ಸಮಾಜ ಕಲ್ಯಾಣ, ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಯುವಜನ ಸೇವಾ ಮತ್ತು ಕ್ರೀಡಾ ಶಾಲೆಯು ವಿದ್ಯಾರ್ಥಿಗಳಿಗೆ ಊಟೋಪಹಾರದ ಪೂರ್ಣಕ ಸರಿಯಾಗುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಕ್ರೀಡಾಪಟುಗಳಿಗೆ ಯೂನಿಫಾರ್ಮ್ ಇತ್ಯಾದಿಗಳನ್ನು ಇಲಾಖೆಯ ವತಿಯಿಂದ ಸೂಕ್ತ ಸಮಯದಲ್ಲಿ ಒದಗಿಸದಿರಲು ಕಾರಣವೇನು?

ಇ) ಕ್ರೀಡಾಪಟುಗಳಿಗೆ ದಿನವಹಿ ಕೊಡುವ ಆಹಾರದ ಪ್ರಮಾಣ ನೀಡುವುದು?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಮಾಜ ಕಲ್ಯಾಣ ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು).—

ಅ) ಬಂದಿದೆ. ಅದಕ್ಕಾಗಿ ಸಂಬಂಧಪಟ್ಟವರಿಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಆದೇಶ ನೀಡಲಾಗಿದೆ.

ಆ) ಪ್ರವೇಶ ಜೂನ್ ೧೯ರಲ್ಲಿ ಆಗಿರುವುದರಿಂದ ವಿದ್ಯಾರ್ಥಿಗಳಿಗೆ ಸೆಪ್ಟೆಂಬರ್ ಮತ್ತು ಅಕ್ಟೋಬರ್ ಮೊದಲನೇ ವಾರದಲ್ಲಿ ಸಮವಸ್ತ್ರಗಳನ್ನು ಒದಗಿಸಲಾಗಿದೆ.

ಇ) ಕ್ರೀಡಾ ಪಟುಗಳಿಗೆ ನಿಗಧಿ ಪಡಿಸಿದ ಮೆನ್ಯು ಪ್ರಕಾರ ಆಹಾರ ಸರಬರಾಜು ಮಾಡಲಾಗುತ್ತಿದೆ.

ಅನುಬಂಧದಲ್ಲಿ ವಿವರಗಳನ್ನು ಕೊಡಲಾಗಿದೆ.

ಅನುಬಂಧ

		ಸುಮಾರು ಗ್ರಾಂ ಲೆಕ್ಕದಲ್ಲಿ
ಬೆಳಿಗ್ಗೆ ಕ್ರೀಡಾ ತರಬೇತಿಗೆ ಮೊದಲು ತಿಂಡಿ	— ಟೀ	ಒಂದು ಕಪ್
	— ೧. ಮೊಟ್ಟೆ	ಒಂದು
	೨. ಹಾಲು	೧೮೦ ಗ್ರಾಂ
	೩. ಬ್ರೆಡ್ ತುಂಡುಗಳು	೬ ತುಂಡು
	೪. ಚಾವಲ್ ಮತ್ತು	
	ಬೆಣ್ಣೆ	೨೫ ಗ್ರಾಂ
	ಅಥವಾ ಪೂರಿ ಪಲ್ಯ	೪
	ಅಥವಾ ಉಪ್ಪಿಟ್ಟು	೧೦೦ ಗ್ರಾಂ
	ಅಥವಾ ದೋಸೆ	೪
	ಅಥವಾ ಇಡ್ಲಿ	
	ಸಾಂಬಾರ್	೪
ಮಧ್ಯಾಹ್ನದ ಊಟ	— ೧. ಅನ್ನ	ಮಿತಿಯಿಲ್ಲ
	೨. ಚಪಾತಿ	೫
	೩. ತರಕಾರಿ ಪಲ್ಯ	ಅವಶ್ಯವಿದ್ದಷ್ಟು
	೪. ಸಾಂಬಾರ್	ಅವಶ್ಯವಿದ್ದಷ್ಟು
	೫. ಮೊಸರು	ಒಂದು ಕಪ್
	೬. ಹಣ್ಣು	ಒಂದು

ಸಾಯಂಕಾಲ ಕ್ರೀಡಾ ತರಬೇತಿಗೆ ಮೊದಲು	— ಟೀ	ಮೂದು ಕಪ್
ಸಾಯಂಕಾಲ ಕ್ರೀಡಾ ತರಬೇತಿ ನಂತರ	— ಹಾಲು	೧೫೦ ಗ್ರಾಂ
ರಾತ್ರಿ ಊಟ	— ಅನ್ನ	ಮಿತಿಯಿಲ್ಲ
	೨. ಚಪಾತಿ	೫
ಮಾಂಸಹಾರಿಗಳಿಗೆ	೩. ಮಾಂಸ :	ಮೀನು ೧೦೦ ಗ್ರಾಂ
	ಮೊಟ್ಟೆ : ಕೋಳಿ	ಅಥವಾ ೨ ಮೊಟ್ಟೆ
ಸಸ್ಯಾಹಾರಿಗಳಿಗೆ	ವಿಶೇಷ ತರಕಾರಿ	
	ಪಲಾವ್	ಆವಶ್ಯವಿದ್ದಷ್ಟು

ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಸಿ. ಅಂಡ್ ಆರ್. ರೂಲ್ಸ್ ಬಗ್ಗೆ

೪೦೬೦. ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).— ಮಾನ್ಯ ಸಮಾಜ ಕಲ್ಯಾಣ ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯಲ್ಲಿ ಕಳೆದ ೧೨ ವರ್ಷಗಳಿಗೂ ಮಿಕ್ಕ ದಕ್ಷತೆಯಿಂದ ಸೇವೆ ಸಲ್ಲಿಸುತ್ತಿರುವ ಸಹಾಯಕ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿ 'ಸಿ ಅಂಡ್ ಆರ್' ಇನ್ನೂ ಇತ್ಯರ್ಥವಾಗದೇ ಇರಲು ಕಾರಣವೇನು?

ಆ) ಈ ಅಧಿಕಾರಿಗಳ ವೇತನವನ್ನು ಕೇಂದ್ರ ಸರ್ಕಾರವು ಪಾವತಿಸುವುದೇ ಅಥವಾ ರಾಜ್ಯ ಸರ್ಕಾರವೇ?

ಇ) ಇವರ ವೇತನ ಪುನರ್ನಿರ್ಣಯಕ್ಕೆ ನ್ಯಾಯಾಲಯವು ತಕ್ಕದಾದ ತೀರ್ಪು ನೀಡಿದ್ದರೂ, ಇದುವರೆಗೆ ಇವರಿಗೆ ಪುನರ್ನಿರ್ಣಯಿತ ವೇತನ ನಿಗಧಿ ಪಡಿಸಿ ಪಾವತಿ ಮಾಡಲು ವಿಳಂಬವಾಗುತ್ತಿರುವುದು ನಿಜವೇ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಮಾಜ ಕಲ್ಯಾಣ ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು).—

ಅ) ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ತಯಾರಿಸಿದ್ದು, ಅದರಲ್ಲಿ ಸಹಾಯಕ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿಗಳ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಹ ಸೇರಿಸಲಾಗಿದೆ. ಸದರಿ ವೃಂದ ಮತ್ತು ನೇಮಕಾತಿ ನಿಯಮಗಳು ಸಮಿಕ್ಷಾ ಸಮಿತಿಯ ಮುಂದಿದೆ.

ಆ) ಕೇಂದ್ರ ಸರ್ಕಾರ ಪಾವತಿಸುವುದು.

ಇ) ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ, ಸಹಾಯಕ ಯುವಜನ ಸೇವಾ ಮತ್ತು ಕ್ರೀಡಾಧಿಕಾರಿಗಳಿಗೆ ಕೇಂದ್ರ ಸರ್ಕಾರದಿಂದ ಮಂಜೂರಾಗಿರುವ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ಇವರುಗಳ ವೇತನವನ್ನು ನಿಗಧಿಪಡಿಸಿ, ಇದರಿಂದ ಉಬ್ಬಿಸಿದ ಬಾಕಿ ಹಣವನ್ನು ನೀಡಲು ಸರ್ಕಾರ ಮಂಜೂರಾತಿ ನೀಡಿದೆ.

ಕೊಯಿಲಾದಲ್ಲಿರುವ ಜಿಲ್ಲಾ ತಳಿ ವರ್ಧನ ಕೇಂದ್ರದಲ್ಲಿ ವಾಹನ ಚಾಲಕರು, ಮತ್ತು ಕೃಷಿ ಸಹಾಯಕರು ನಿಗಾವಣೆಗೊಳ್ಳದೇ ಇರುವುದು.

೪೦೬೩. ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ) —ಮಾನ್ಯ ರೇಷ್ಮೆ ಮತ್ತು ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಲ್ಲಿ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಕೊಯಿಲದಲ್ಲಿರುವ ಜಿಲ್ಲಾ ಜಾನುವಾರು ಕ್ಷೇತ್ರದ ಹಂದಿ ತಳಿ ವರ್ಧನ ಕೇಂದ್ರದಲ್ಲಿ ವಾಹನ ಚಾಲಕರು ಮತ್ತು ಕೃಷಿ ಸಹಾಯಕರು ನಿಗಾವಣೆಗೊಳ್ಳದೆ ಇದೇ ಸ್ಥಳದಲ್ಲಿ ಕೆಲಸ ಮಾಡಿಕೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?